
**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**


**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ಮಾನಸಗಂಗೋತ್ರಿ, ಮೈಸೂರು – 570 006

**ದೂರವಾಣಿ ಸಂಖ್ಯೆ** : (0821) 2514449, 2514618
**Fax** : 0821 – 2510515
**Email :** director@aiishmysore.in

**ಕೆಲಸದ ಸಮಯ** : 9.00 am ರಿಂದ 5.30 pm ಸೋಮವಾರ ದಿಂದ ಶುಕ್ರವಾರ
(ಭಾರತ ಸರಕಾರದ ರಜಾದಿನಗಳು ಅನ್ವಹಿಸುತ್ತದೆ)

# ಶ್ರವಣದೋಷ ಮತ್ತು ಶ್ರವಣೋಪಕರಣಗಳ ಬಗ್ಗೆ ಸತ್ಯಾಂಶಗಳು




**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ಮಾನಸಗಂಗೋತ್ರಿ, ಮೈಸೂರು – 570 006

# ಶ್ರವಣದೋಷ ಮತ್ತು ಶ್ರವಣೋಪಕರಣಗಳ ಬಗ್ಗೆ ಸತ್ಯಾಂಶಗಳು


1. **ಮಿಥ್ಯ** : ನನ್ನ ವಯಸ್ಸಿನಲ್ಲಿ ಶ್ರವಣದೋಷ ಸಹಜ

**ಸತ್ಯಾಂಶ :** ಯಾವುದೇ ವಯಸ್ಸಿನಲ್ಲಿ ಶ್ರವಣದೋಷವು ಸಹಜವಲ್ಲ. ವ್ಯಕ್ತಿಯು ಎಷ್ಟೇ ದೊಡ್ಡವನಾಗಿರಲಿ ಅಥವಾ ಚಿಕ್ಕವನಾಗಿರಲಿ ಶ್ರವಣ ಶಕ್ತಿಯು ಮುಖ್ಯವಾದ ಅಂಶವಾಗಿದೆ.

2. **ಮಿಥ್ಯ :** ಶ್ರವಣದೋಷವಿದ್ದಲ್ಲಿ ನನಗೆ ತಿಳಿದಿರುತ್ತಿತ್ತು.

**ಸತ್ಯಾಂಶ :** ಕೆಲವೊಮ್ಮೆ ಒಂದೇ ಕಿವಿಯಲ್ಲಿ ತೊಂದರೆ ಇರಬಹುದು ಅಥವಾ ಅತೀ ಕಡಿಮೆ ಶ್ರವಣದೋಷ ಇರಬಹುದು. ಈ ಸಂದರ್ಭಗಳಲ್ಲಿ ಶ್ರವಣದೋಷವಿದೆ ಎಂದು ಗಮನಿಸಲು ಕಷ್ಟ. ಸಾಮಾನ್ಯವಾಗಿ ಸ್ನೇಹಿತರು ಹಾಗೂ ಕುಟುಂಬದವರು ಈ ತೊಂದರೆಯನ್ನು ಮೊದಲು ಗಮನಿಸುತ್ತಾರೆ.

3. **ಮಿಥ್ಯ:** ಕಿವಿ ತೊಂದರೆ ಇರುವ ಮಗುವನ್ನು ಮೂರು ವರ್ಷವಾಗುವ ತನಕ ಕಂಡು ಹಿಡಿಯಲು ಸಾಧ್ಯವಿಲ್ಲ.



**ಸತ್ಯಾಂಶ** : ಕಿವಿ ತೊಂದರೆಯನ್ನು ನವಜಾತ ಶಿಶುವಿನಲ್ಲಿ ಕಂಡು ಹಿಡಿಯಬಹುದು. ಈ ತೊಂದರೆಯ ಸುಳಿವು ಸಿಕ್ಕಲ್ಲಿ ತುರ್ತಾಗಿ ಪರೀಕ್ಷಿಸಿ ಮತ್ತು ಚಿಕಿತ್ಸೆಯನ್ನು ಬೇಗನೆ ನೀಡುವುದು ಅತ್ಯವಶ್ಯಕ. ಮಗು ಎಷ್ಟು ಚಿಕ್ಕದು ಎಂಬುದು ಮುಖ್ಯವಲ್ಲ.

4. **ಮಿಥ್ಯ:** ನನ್ನ ಮಗುವಿಗೆ ಈಗ ಕಿವಿ ಕೇಳಿಸುತ್ತಿಲ್ಲ. ಸ್ವಲ್ಪ ಸಮಯ ಕಳೆದಂತೆ ಮಗುವು ಶ್ರವಣ ಶಕ್ತಿಯನ್ನು ಬೆಳೆಸಿಕೊಳ್ಳುತ್ತದೆ.

**ಸತ್ಯಾಂಶ** : ಮಗುವಿಗೆ ಹುಟ್ಟಿನಿಂದಲೇ ಕಿವಿತೊಂದರೆಯಿದ್ದ ಪಕ್ಷದಲ್ಲಿ, ಸ್ವಲ್ಪ ಕಾಲದ ನಂತರ ಸಹಜವಾಗಿ ಕೇಳಿಸಿಕೊಳ್ಳಲು ಆರಂಭಿಸುವ ಸಂಭವವಿಲ್ಲ. ಮಗುವಿಗೆ ಕಿವಿ ತೊಂದರೆ ಇದೆ ಎಂದು ಅನುಮಾನ ಬಂದ ತಕ್ಷಣವೇ ಕಿವಿಪರೀಕ್ಷೆ ಮಾಡಿಸಬೇಕು. ಮಗುವು ತನ್ನಷ್ಟಕ್ಕೆ ತಾನು ಕೇಳಲು ಆರಂಭಿಸುವವರೆಗೂ ಕಾಯಬಾರದು.

5. **ಮಿಥ್ಯ:** ನನಗಿರುವ ಕಿವಿತೊಂದರೆಯ ಮಾದರಿಯನ್ನು (ರೀತಿಯನ್ನು) ಸರಿಪಡಿಸಲು ಸಾಧ್ಯವಿಲ್ಲ.

**ಸತ್ಯಾಂಶ** : ಕೆಲವು ರೀತಿಯ ಶ್ರವಣದೋಷವನ್ನು ಔಷಧಿಯ ಮೂಲಕ ಗುಣಪಡಿಸಬಹುದು. ಹಿಂದೆ ಕೆಲವು ರೀತಿಯ ಶ್ರವಣದೋಷವನ್ನು ಶ್ರವಣಸಾಧನಗಳನ್ನು ಉಪಯೋಗಿಸಿ ನಿಭಾಯಿಸಲು ಸಾದ್ಯವಾಗುತ್ತಿರಲಿಲ್ಲ. ಉದಾಹರಣೆಗೆ : ಎತ್ತರ ಸ್ವರದಲ್ಲಿ ಮಾತ್ರ, ಶ್ರವಣದೋಷವಿರುವ ವ್ಯಕ್ತಿಗೆ ಮುಂಚೆ ಶ್ರವಣೋಪಕರಣವು ಯಾವುದೇ ರೀತಿಯಲ್ಲಿ ಉಪಯೋಗಕ್ಕೆ ಬರುತ್ತಿರಲಿಲ್ಲ. ಆದರೆ ಈಗ

**19. ಮಿಥ್ಯ: ಎಲ್ಲಾ ಶ್ರವಣದೋಷವಿರುವವರು ಸನ್ನೆ ಭಾಷೆಯನ್ನು ಉಪಯೋಗಿಸುತ್ತಾರೆ.**




**ಸತ್ಯಾಂಶ :** ಅನೇಕ ಶ್ರವಣದೋಷವಿರುವ ವ್ಯಕ್ತಿಗಳು ಮಾತಿನ ಮೂಲಕ ವ್ಯವಹಾರಿಸುತ್ತಾರೆ. ಮಾತಿನ ಮೂಲಕ ಸಂವಹನ ಮಾಡುವುದು ಸಾಮಾನ್ಯ ಹಾಗೂ ಸುಲಭವಾದ ರೀತಿಯಾಗಿದೆ. ಆದ್ದರಿಂದ ಬಾಲ್ಯದಿಂದ ಶ್ರವಣದೋಷವಿರುವವರು ಸಹ ಸಾಮಾನ್ಯ ಜನರು ಮಾತನಾಡುವಂತೆ ಯಾವುದೇ ತೊಂದರೆಯಿಲ್ಲದೆ ಪರಿಣಾಮಕಾರಿಯಾಗಿ ಮಾತನಾಡಬಹುದು. ಆದರೆ ಸರಿಯಾದ ಸಮಯಕ್ಕೆ ಸರಿಯಾದ ತರಬೇತಿ ನೀಡಿದಾಗ ಮಾತ್ರ ಇದು ಸಾಧ್ಯವಾಗುತ್ತದೆ.



ಶ್ರವಣಸಾಧನಗಳನ್ನು ಉಪಯೋಗಿಸುವುದರಿಂದ ಯಾವುದೇ ರೀತಿಯ ಶ್ರವಣದೋಷವನ್ನು ನಿಭಾಯಿಸಬಹುದು. ಶಸ್ತ್ರಚಿಕಿತ್ಸೆ ಹಾಗೂ ಔಷಧಿಗಳಿಂದ ಸರಿಪಡಿಸಲಾಗದ ಶ್ರವಣದೋಷವನ್ನು ಶ್ರವಣಸಾಧನ ಉಪಯೋಗಿಸುವುದರಿಂದ ನಿಭಾಯಿಸಬಹುದು.

**6. ಮಿಥ್ಯ:** ಶ್ರವಣೋಪಕರಣವು ಶ್ರವಣದೋಷವನ್ನು ಗುಣಪಡಿಸುತ್ತದೆ.

**ಸತ್ಯಾಂಶ** : ಹೇಗೆ ಕನ್ನಡಕಗಳನ್ನು ಉಪಯೋಗಿಸುವುದರಿಂದ ನಮ್ಮ ದೃಷ್ಟಿಯು ಉತ್ತಮಗೊಳ್ಳುತ್ತದೆಯೇ ಹೊರತು ಸರಿಹೋಗದು. ಅದೇ ರೀತಿಯಲ್ಲಿ ಶ್ರವಣಸಾಧನಗಳನ್ನು ಉಪಯೋಗಿಸುವುದರಿಂದ ಶಬ್ದಗಳು ಜೋರಾಗುವುದು ಹಾಗು ಕೇಳುವುದು ಸುಲಭವಾಗುವುದು. ಇವು ಅನೇಕ ವೇಳೆ ವ್ಯಕಿಯ ಕೇಳುವಿಕೆಯಲ್ಲಿ ದೊಡ್ಡ ವ್ಯತ್ಯಾಸವನ್ನುಂಟು ಮಾಡುತ್ತವೆ ಹಾಗೂ ಜೀವನಶೈಲಿಯನ್ನು ಉತ್ತಮಗೊಳಿಸುತ್ತದೆ. ಏನೇ ಆದರೂ ಅವು ಶ್ರವಣಶಕ್ತಿಯನ್ನು ಸಹಜಸ್ಥಿತಿಗೆ ತರುವುದಿಲ್ಲ.

**7. ಮಿಥ್ಯ:** ನನ್ನ ವಯಸ್ಸಿಗೆ ಶ್ರವಣಸಾಧನಗಳನ್ನು ಉಪಯೋಗಿಸಲು ಆಗುವುದಿಲ್ಲ.

**ಸತ್ಯಾಂಶ** : ವಯಸ್ಸಾದವರು ಶ್ರವಣಸಾಧನಕ್ಕೆ ಹೊಂದಿಕೊಂಡು ಕೇಳಿಸಿಕೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ. ಆದರೆ ಶ್ರವಣಸಾಧನಗಳನ್ನು ಉಪಯೋಗಿಸಲು ಯಾವುದೇ ರೀತಿಯ ವಯಸ್ಸಿನ ಮಿತಿಯಿಲ್ಲ. ವ್ಯಕ್ತಿಗೆ ಎಷ್ಟೇ ವಯಸ್ಸಾದರೂ ಶ್ರವಣ ದೋಷವಿದ್ದಲ್ಲಿ ಶ್ರವಣ ಸಾಧನಗಳಿಂದ ಸಹಾಯವಾಗುತ್ತದೆ.


**8. ಮಿಥ್ಯ:** ಶ್ರವಣೋಪಕರಣದ ಬಳಕೆಯಿಂದ ನನ್ನ ಶ್ರವಣ ಶಕ್ತಿ ಹಾಳಾಗುತ್ತದೆ.

**ಸತ್ಯಾಂಶ** : ಪರಿಣಿತಿ ಹೊಂದಿದ ಶ್ರವಣತಜ್ಞರು ಶ್ರವಣೋಪಕರಣಗಳನ್ನು ಧರಿಸುವವನ ಅವಶ್ಯಕತೆಯ ಮೇರೆಗೆ ಶ್ರವಣೋಪಕರಣಗಳನ್ನು ಶಿಫಾರಸ್ಸು ಮಾಡುತ್ತಾರೆ. ವ್ಯಕ್ತಿಯ ಕೇಳುವಿಕೆಯು ಉತ್ತಮಗೊಳ್ಳಲು, ಶ್ರವಣೋಪಕರಣಗಳನ್ನು ಕೂಲಂಕುಷವಾಗಿ ಪರೀಕ್ಷಿಸಿ ಕೊಡುತ್ತಾರೆ. ಈ ಕಾರಣದಿಂದಾಗಿ ಯಾವ ರೀತಿಯಲ್ಲೂ ಶ್ರವಣ ಸಾಧನವು ಹಾನಿಕಾರಿಯಾಗಲು ಸಾಧ್ಯವಿಲ್ಲ.

**9. ಮಿಥ್ಯ:** ಶ್ರವಣಸಾಧನವು ಎಷ್ಟು ಚಿಕ್ಕದಾಗಿರುತ್ತದೋ ಅಷ್ಟೇ ಒಳ್ಳೆಯದು.

**ಸತ್ಯಾಂಶ** : ಒಬ್ಬ ವ್ಯಕ್ತಿಗೆ ಉತ್ತಮವಾದ ಶ್ರವಣಸಾಧನವು ತನ್ನ ಕಿವಿ ತೊಂದರೆಯ ರೀತಿ ಹಾಗೂ ತೀವ್ರತೆಯ ಮೇಲೆ ಅವಲಂಬಿತವಾಗಿರುತ್ತದೆ. ಹಲವು ರೀತಿಯ ಶ್ರವಣೋಪಕರಣಗಳಿವೆ. ಒಬ್ಬ ವ್ಯಕ್ತಿಗೆ ಉತ್ತಮವಾದ ಶ್ರವಣೋಪಕರಣವು ಸಣ್ಣದೇ ಅಗಿರಬೇಕೆಂಬ ಅವಶ್ಯಕತೆಯಿಲ್ಲ.

**10. ಮಿಥ್ಯ: ಎರಡು ಕಿವಿಗಳಿಗೆ ಶ್ರವಣಸಾಧನಗಳನ್ನು ಧರಿಸುವ ಅವಶ್ಯಕತೆಯಿಲ್ಲ**




**ಸತ್ಯಾಂಶ** : ಸಹಜವಾಗಿ ನಾವು ಎರಡು ಕಿವಿಗಳಿಂದ ಕೇಳಿಸಿಕೊಳ್ಳುತ್ತೇವೆ. ಹಲವರು, ಮುಖ್ಯವಾಗಿ ಮಕ್ಕಳು ಎರಡು ಶ್ರವಣೋಪಕರಣಗಳಿಂದ ಹೆಚ್ಚು ಲಾಭ ಪಡೆಯುತ್ತಾರೆ. ಎರಡು

ಶ್ರವಣೋಪಕರಣಗಳನ್ನು ಧರಿಸುವವನು, ಗಲಾಟೆಯಲ್ಲಿ ಉತ್ತಮ ಕೇಳುವಿಕೆ, ಒಳ್ಳೆಯ ಶಬ್ದದ ಗುಣಮಟ್ಟ, ಮಾತನ್ನು ಅರ್ಥಮಾಡಿಕೊಳ್ಳುವ ಶಕ್ತಿ ಹಾಗೂ ಸುಲಭವಾಗಿ ಶಬ್ದ ಬರುವ ದಿಕ್ಕನ್ನು ಗುರುತಿಸುತ್ತಾನೆ. ಅಲ್ಲದೆ ಆ ವ್ಯಕ್ತಿಯು, ಶ್ರವಣೋಪಕರಣಗಳನ್ನು ಕಡಿಮೆ ಶಬ್ದ ಮಟ್ಟದಲ್ಲಿ ಉಪಯೋಗಿಸಬಹುದು. ಇಷ್ಟಲ್ಲದೆ, ವ್ಯಕ್ತಿಗೆ ಕಿವಿಯೊಳಗೆ ಶಬ್ದ ಬರುತ್ತಿದ್ದರೆ (ಟಿನೈಟಸ್) ಎರಡು ಶ್ರವಣೋಪಕರಣಗಳನ್ನು ಧರಿಸುವುದರಿಂದ ಆ ಶಬ್ದವನ್ನು ಮರೆಮಾಚಲು ಸಹಾಯವಾಗುವುದು.

11. **ಮಿಥ್ಯ:** ನಾನು ಶ್ರವಣೋಪಕರಣವನ್ನು ಅವಶ್ಯಕತೆಯಿದ್ದಾಗ ಮಾತ್ರ ಧರಿಸುತ್ತೇನೆ.

**ಸತ್ಯಾಂಶ** : ನಮಗೆ ಶ್ರವಣ ಶಕ್ತಿಯು ಎಲ್ಲಾ ಸಂದರ್ಭದಲ್ಲೂ ಅವಶ್ಯಕವಾಗಿರುತ್ತದೆ. ಕೇವಲ ವಿಶೇಷ ಸಂದರ್ಭಗಳಿಗೆ ಅಥವಾ ಮುಖ್ಯ ವಾರ್ತಾಲಾಪಕ್ಕೆ ಅಲ್ಲ. ಆದ್ದರಿಂದ ಶ್ರವಣಸಾಧನವನ್ನು ಶ್ರವಣ ದೋಷವಿದ್ದಲ್ಲಿ ಯಾವಾಗಲೂ ಧರಿಸಿರಬೇಕು. ಮೊದಮೊದಲಿಗೆ ನಿಮಗೆ ಶ್ರವಣಸಾಧನವನ್ನು ಉಪಯೋಗಿಸಲು ಅಹಿತಕರವೆನಿಸಬಹುದು. ಮೊದಲಿಗೆ, ದಿನದಲ್ಲಿ ಕೆಲವು ಗಂಟೆಗಳ ಕಾಲ ಮಾತ್ರ ಶ್ರವಣಸಾಧನವನ್ನು ಧರಿಸಲು ಆರಂಭಿಸಿ. ಕ್ರಮೇಣ ಶ್ರವಣಸಾಧನವನ್ನು ಧರಿಸಿಕೊಳ್ಳುವ ಕಾಲವನ್ನು ಹೆಚ್ಚಿಸಿಕೊಳ್ಳುತ್ತ ಕೊನೆಯಲ್ಲಿ ದಿನವಿಡಿ ಹಿತಕರವಾಗಿ ಧರಿಸುವಂತೆ ಮಾಡಿಕೊಳ್ಳಬೇಕು.

12. **ಮಿಥ್ಯ:** ಶ್ರವಣಸಾಧನವನ್ನು ಧರಿಸಿದರೆ ಅದು ವೃದ್ಧಾಪ್ಯವನ್ನು ಸೂಚಿಸುತ್ತದೆ.



**ಸತ್ಯಾಂಶ** : ವೃದ್ಧರಿಗೆ ಮಾತ್ರ ಶ್ರವಣಸಾಧನಗಳ ಅಗತ್ಯವಿದೆ ಎಂದಲ್ಲ. ಅನೇಕ ಶಿಶುಗಳಲ್ಲಿ, ಚಿಕ್ಕ ಮಕ್ಕಳಲ್ಲಿ ಮತ್ತು ಯುವಕರಲ್ಲಿ ಕಿವಿ ತೊಂದರೆಯನ್ನು ಕಾಣಬಹುದು. ಹಾಗೂ ಇವರೆಲ್ಲರಿಗೂ ಶ್ರವಣೋಪಕರಣ ಉಪಯೋಗಿಸುವುದರಿಂದ ಸಹಾಯವಾಗುತ್ತದೆ.

13. **ಮಿಥ್ಯ:** ಶ್ರವಣಸಾಧನವನ್ನು ಖರೀದಿಸಲು ನಾನು ಅಶಕ್ತನಾಗಿದ್ದೇನೆ.

ಸತ್ಯಾಂಶ : ಶ್ರವಣಸಾಧನವು ಎಷ್ಟು ಉಪಯೋಗಕಾರಿಯೆಂದರೆ ಅವುಗಳಿಗೆ ಅಷ್ಟು ಬೆಲೆಯನ್ನು ಕೊಡುವುದು ವ್ಯರ್ಥವಾಗುವುದಿಲ್ಲ. ಎಲ್ಲದಕ್ಕೂ ಹೆಚ್ಚಾಗಿ ಈಗ ಸರ್ಕಾರಿ ಯೋಜನೆಗಳು ಮುಂಬರುತ್ತಿವೆ. ಆದ್ದರಿಂದ ಶ್ರವಣ ಸಾಧನವನ್ನು ಖರೀದಿಸಲು ಅಶಕ್ತರಾದವರು ಕೂಡ ತೊಂದರೆಯಿಲ್ಲದೆ ಶ್ರವಣಸಾಧನಗಳನ್ನು ಪಡೆದುಕೊಳ್ಳಬಹುದು. ಶ್ರವಣೊಪಕರಣಗಳನ್ನು ಕಡಿಮೆ ಬೆಲೆಗೆ ಮಾರುವ ಸಂಘ ಸಂಸ್ಥೆಗಳಿವೆ. ಇದರಿಂದಾಗಿ ರೋಗಿಗೆ ಹಣದ ಉಳಿತಾಯ ಹೆಚ್ಚಾಗುತ್ತದೆ.

14. **ಮಿಥ್ಯ:** ಶ್ರವಣಸಾಧನವನ್ನು ಧರಿಸುವಷ್ಟು ಕೆಟ್ಟದಾಗಿಲ್ಲ ನನ್ನ ಕಿವಿ ತೊಂದರೆ.

**ಸತ್ಯಾಂಶ** : ಶ್ರವಣೋಪಕರಣ ಧರಿಸಲು ಕಿವಿ ತೊಂದರೆಯು ತುಂಬಾ ತೀವ್ರವಾಗುವವರೆಗೂ ಕಾಯಬಾರದು. ನಿಮಗೆ ಸ್ವಲ್ಪ ಮಟ್ಟಿನ ಶ್ರವಣದೋಷವಿದ್ದಾಗ ಕೂಡ ಶ್ರವಣಸಾಧನಗಳನ್ನು



ಬಳಸುವುದರಿಂದ ಅತಿ ಮೆದುವಾದ ಧ್ವನಿಯನ್ನು ಕೂಡ ಕೇಳಿಸಿಕೊಳ್ಳಲು ಸಹಾಯ ಮಾಡುತ್ತದೆ. ನೀವು ಮಾತನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತೀರಿ. ಮಕ್ಕಳಿಗೆ ಶ್ರವಣಸಾಧನಗಳ ಅವಶ್ಯಕತೆಯು ಇನ್ನೂ ಹೆಚ್ಚಾಗಿರುತ್ತದೆ.

15. **ಮಿಥ್ಯ:** ಶ್ರವಣಸಾಧನಗಳನ್ನು ಹಾಕಿಸಲು ನನ್ನ ಮಗು ತುಂಬಾ ಚಿಕ್ಕದು.

**ಸತ್ಯಾಂಶ** : ಕಿವಿ ತೊಂದರೆಯಿದ್ದಲ್ಲಿ ಒಂದು ತಿಂಗಳ ಮಗುವಿಗೂ ಶ್ರವಣಸಾಧನಗಳನ್ನು ಅಳವಡಿಸಬಹುದು. ನಾವು ಎಷ್ಟು ಬೇಗ ಶ್ರವಣಸಾಧನಗಳನ್ನು ಮಗುವಿಗೆ ಹಾಕಿಸುತ್ತೇವೆಯೋ ಅಷ್ಟೇ ಉಪಯೋಗಕಾರಿಯಾಗಿರುತ್ತದೆ. ಹಾಗು ಸಾಮಾನ್ಯ ಮಕ್ಕಳಂತೆ ಮಗು ಬೇಗನೆ ಮಾತನಾಡಲು ಮತ್ತು ಬಾಷೆಯ ಪರಿಣಿತಿಯನ್ನು ಹೊಂದಲು ಮಗುವಿಗೆ ಒಳ್ಳೆಯ ಅವಕಾಶ ಸಿಗುತ್ತದೆ.


16. **ಮಿಥ್ಯ** : "ಮಗು 3 ಅಥವಾ 5 ವರ್ಷದವನಾದಾಗ ಮಾತನಾಡಲು ಪ್ರಾರಂಭಿಸುತ್ತಾನೆ . ಇವನ ತಾತನು 5 ವರ್ಷವಾಗುವ ತನಕ ಮಾತನಾಡುತ್ತಿರಲಿಲ್ಲ."

ಸತ್ಯಾಂಶ : ಸಾಮಾನ್ಯವಾಗಿ ಮಗು 12-18 ತಿಂಗಳಲ್ಲಿ 2-3 ಸಣ್ಣ ಹಾಗೂ ಸುಲಭವಾದ ಶಬ್ದಗಳನ್ನು ಮಾತನಾಡಲು ಪ್ರಾರಂಭಿಸುತ್ತದೆ. ಮಗು ದೊಡ್ಡದಾದ ಮೇಲೆ ಮಾತನಾಡಲು ಪ್ರಾರಂಭಿಸುತ್ತದೆ ಎಚಿದು ಕಾಯಬಾರದು. ಬೆಳವಣಿಗೆಯ ಮೈಲಿಗಲ್ಲಿನ ಬಗ್ಗೆ ತಿಳಿದಿರಬೇಕು. ಹಾಗೂ ಅದು ತಡವಾಗಿ ಕಂಡು ಬಂದ ಸಂದರ್ಭದಲ್ಲಿ ವಾಕ್‌ಶ್ರವಣ ಸಂಸ್ಥೆಗೆ ಭೇಟಿ ನೀಡಬೇಕು. ಯಾಕೆಂದರೆ ಕಿವಿ ತೊಂದರೆಯು, ಮಕ್ಕಳು ತಡವಾಗಿ ಮಾತನಾಡುವುದಕ್ಕೆ ಒಂದು ಮುಖ್ಯ ಕಾರಣವಾಗಿದೆ. ಆದ್ದರಿಂದ ಮಗುವಿನ ಕಿವಿಯನ್ನು ಆದಷ್ಟು ಬೇಗ ಒಮ್ಮೆ ಪರೀಕ್ಷಿಸಿಕೊಳ್ಳಬೇಕು.

17.**ಮಿಥ್ಯ** : ಕಿವಿ ತೊಂದರೆಯಿಂದ ತಡವಾದ ಮಾತು ಹಾಗು ಭಾಷೆಯ ಬೆಳವಣಿಗೆ ಇರುವ ಮಕ್ಕಳಿಗೆ ಶ್ರವಣಸಾಧನಗಳನ್ನು ಅಳವಡಿಸಿದ ತಕ್ಷಣ ಮಾತು ಬರುತ್ತದೆ.

**ಸತ್ಯಾಂಶ** : ಶ್ರವಣಸಾಧನವು ಕೇವಲ ಶಬ್ದವನ್ನು ಜೋರಾಗಿ ಮಾಡುತ್ತದೆ. ಇದರಿಂದ ಕಿವಿ ತೊಂದರೆಯಿರುವ ಮಕ್ಕಳು ಕೇಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಮಕ್ಕಳು ಕೇಳಿಸಿಕೊಳ್ಳುವ ಮೂಲಕ ಮಾತನಾಡಲು ಕಲಿಯುತ್ತಾರೆಂಬುದು ಸತ್ಯ. ಆದರೆ ಕೇವಲ ಶ್ರವಣಸಾಧನಗಳನ್ನು ಅಳವಡಿಸಿದರೆ ಮಾತ್ರ ಸಾಲದು, ಎಲ್ಲಾ ಮಕ್ಕಳಿಗೂ ಶ್ರವಣೋಪಕರಣಗಳನ್ನು ಧರಿಸಿದ ನಂತರ ಒಳ್ಳೆಯ ಮಾತು ಹಾಗೂ ಭಾಷೆಯ ಬೆಳವಣಿಗೆಗೆ ಸರಿಯಾದ ವಾಕ್ ಶ್ರವಣ ತರಬೇತಿಯ ಅಗತ್ಯವಿದೆ.

18. **ಮಿಥ್ಯ:** ಶ್ರವಣದೋಷವಿರುವ ಮಕ್ಕಳು ಸಾಧಾರಣ ಮಕ್ಕಳು ಹೋಗುವಂತಹ ಶಾಲೆಗೆ ಹೋಗಲು ಸಾಧ್ಯವಿಲ್ಲ.



**ಸತ್ಯಾಂಶ** : ಸರಿಯಾದ ಸಮಯಕ್ಕೆ ಸರಿಯಾದ ರೀತಿಯ ತರಬೇತಿ ದೊರಕಿದ್ದಲ್ಲಿ ಶ್ರವಣದೋಷವಿರುವ ಮಕ್ಕಳು ಸಹ ಸಾಧಾರಣ ಮಕ್ಕಳು ಹೋಗುವಂತಹ ಶಾಲೆಗೆ ಹೋಗಬಹುದು. ಬೇರೆ ಮಕ್ಕಳಂತೆ ಎಲ್ಲಾ ರೀತಿಯ ಚಟುವಟಿಕೆಗಳಲ್ಲಿ ಅವರೂ ಕೂಡ ಭಾಗವಹಿಸಬಹುದು.